# ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟೆಂಬರ್ ತಾ॥ 12, ಸ॥ 1885.

ಸೂಚನೆ — ಈ ಭಾಗವನ್ನು ಪ್ರತ್ಯೇಕ ನೇಮಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.


## ೨ನೇ ಭಾಗ.

### ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ಫಿನ್ಯಾಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗೆದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಚೇಂಜ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಹ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯಿಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಚೇಂಜ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿಸರ್ಡ್,
ಕಾಂಪ್ಟ್ರೋಲರ್.

### ಅಂಬಕೇ ಇಲಾಖೆ.

ನಂ. 230—127. ತಾರೀಖು 20ನೇ ಆಗಸ್ಟ್ 1885.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸಾರ ಬೆಂಗಳೂರು ತಾಲ್ಲೂಕು ಹೊಯಿಟಫೀಲ್ಡ್‌ನಲ್ಲಿ ಹೋಬಳಿ ಅಂಬಕೇ ಆಫೀಸು ಸ್ಥಾಪಿಸಲ್ಪಟ್ಟಿ ಯಿರುತ್ತೆ.

ನಂ. 260—143.

ತಾರೀಖು 4ನೇ ಸೆಪ್ಟಂಬರ್ 1885.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರ ವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸುಗಳು ಸ್ಥಾಪಿಸಲ್ಪಟ್ಟು ಇರುತ್ತೆ:—

| ತಾಲ್ಲೂಕು. | | ಅಂಚೆ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು. |
|---|---|---|
| ಮದ್ದಗಿರಿ | | |
| ಕಿಡ್ಲಘಟ್ಟ | .. | ತೊವಿನಕೆರೆ |
| ಡಿಟೋ | .. | ಕೈವಾರ |
| ಡಿಟೋ | .. | ಜಂಗಂಕೋಟೆ |
| ಡಿಟೋ | .. | ಸಾದ್ಲಿ |
| | .. | ಬಸೆಟ್ಟಿಹಳ್ಳಿ |

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

## ಕೋಲಾರ ಡಿಸ್ಟ್ರಿಕ್ಟು.

ತಾರೀಖು 1ನೇ ಸೆಪ್ಟಂಬರ್ 1885.

ಇದರಿಂದ ಸರ್ವ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ವಿವರಿಸೋಣಾದ ಬೇವಾರಸಾಗಿ 2 ವರುಷಗಳ ಲಾಗಾಯತು ನಿಂತಿರುವ 2 ರಿಜಿಸ್ಟ್ರಾದ ತಂಸೂಕುಗಳನ್ನ ಹಾಜರ್ಮಾಡಿದವರಾಗಲಿ ಅವುಗಳಲ್ಲಿ ಬಾಧ್ಯತೆ ಪುಳ್ಳವರಾಗಲಿ ಈ ಲಾಗಾಯತು 1 ತಿಂಗಳ ವಳಗಾಗಿ ಬೌರಿಂಗ್‌ಪೇಟೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ಫೀಸ್ ಪಾವತಿಯಿಂದ ವಾಪಸ್ ಪಡಿಯಬಹುದು, ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟ್ಸ್ 85ನೇ ಸೆಕ್ಷನ್ ಪ್ರಕಾರ ಅವುಗಳು ನಾಶಪಡಿಸಲ್ಪಡುವವು.

| ಆಫೀಸಿನ ಹೆಸರು. | ತಂಸೂಕಿನ ಬುಕ್ಕು ಮತ್ತು ಇಸವಿ ನಂಬರ್. | ಕಕ್ಷಿಗಾರರ ಹೆಸರು. | | ತಂಸೂಕಿನ ತಾರೀಖು. | ರಿಜಿಸ್ಟ್ರಿಗೆ ಹಾಜರಾದ ತಾರೀಖು. | ರಿಜಿಸ್ಟ್ರಾರರ ತಾರೀಖು. | ತಂಸೂಕಿನ ಸ್ವಭಾವ ಮತ್ತು ಕಿಮ್ಮತ್ತು. |
|---|---|---|---|---|---|---|---|
| | | ತಂಸೂಕು ಬರದುಕೊಟ್ಟವರು. | ತಂಸೂಕು ಬರಿಸಿಕೊಂಡವರು. | | | | |
| ಬೌರಿಂಗ್‌ಪೇಟೆ ಸಬ್ ರಿಜಿಸ್ಟ್ರಾರ್ ಆಫೀಸ್. | 1ನೇ ಬುಕ್ಕು 1883—84ನೆ ಇಸವಿ ನಂ. 27 | ವೆರಿಗಂ ಬಲಗೈ ಕೂ ರ್ಮಾಯಿ ಪಾಪಿ | ದಿಗವ ರ್ಯಾಗಡಹಳ್ಳೀಯಲ್ಲಿರುವ ಗಂಗರಡ್ಡಿ | 1883ನೇ ಇಸವಿ ಜೂನ್ ತಾರೀಖು 28 | 1883ನೇ ಇಸವಿ ಜುಲೈ ತಾರೀಖು 4 | ಡಿಟೋ | ವೆರಿಗಂ ಗ್ರಾಮದ ಬಳಿ ಇರುವ ಖುಷ್ಕಿ 99—100ನೇ ನಂಬರುಗಳುಳ್ಳ ಜಮೀನು ಬೀಜವರೀ ಉಳಿಕ್ಕೆ ಕಂದಾಯ 1—14—2 ವುಳ್ಳ ಜಮೀನುಗಳು 10 ರೂಪಾಯಿಗಳಿಗೆ ಕ್ರಯವೊಡಿರುವದಾಗಿ. |
| ಡಿಟೋ | ಡಿಟೋ ಇಸವಿ ನಂಬರ್ 28 | ವೆರಿಗ ಗ್ರಾಮದಲ್ಲಿರುವ ದೋಭಿ ಪಿಲ್ಲಿ | ವೆರಿಗ ಗ್ರಾಮದಲ್ಲಿರುವ ಕಂಣಂಬೆಲೆ ಪಿಲ್ಲನ್ನ | 1883ನೇ ಇಸವಿ ಜೂನ್ ತಾರೀಖು 28 | 1883ನೇ ಇಸವಿ ಜುಲೈ ತಾರೀಖು 4 | ಡಿಟೋ | ವೆರಿಗ ಗ್ರಾಮದ ಬಳಿ ಇರುವ ಖುಷ್ಕಿ 45—230ನೇ ನಂಬರು ಜಮೀನುಗಳು ಬೀಜವರೀ ಉಳಿಗೆ ಕಂದಾಯ 3—8—5 ವುಳ್ಳ ಜಮೀನುಗಳು 13 ರೂಪಾಯಿಗಳಿಗೆ ಕ್ರಯಮಾಡಿರುವದಾಗಿ. |

ಎಸ್. ಚಲುವಯ್ಯಂಗಾರ್,
ಘರ್ ರಿಜಿಸ್ಟ್ರಾರ್.